**ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಂ. ಎಫ್. ಸಿ. ನ್ಯಾಯಾಲಯ ಬೇಲೂರು.**

---

**ಅಸಲು ದಾವಾ ನಂ** ಃ **248/2019** **ದಿನಾಂಕ** ಃ **19-04-2022.**
ಪಿ.**ಡಬ್ಲ್ಯೂ** ಃ **1**

---

**ಃಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತುಃ**

*******

ಪಾಟೀ ಸವಾಲುಃ ಪ್ರತಿ**ವಾದಿ ಪರ ವಕೀಲರಾದ** ಶ್ರೀ ಬಿ ಎಸ್ ಜಿ **ರವರಿಂದಃ-**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಈ ದಾವೆಯಲ್ಲಿ ಯಾವ ಪರಿಹಾರ ಕೋರಿ ದಾಖಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನನ್ನ ಜಮೀನು ಬೇಕು ಎಂದು ಸ್ವತಃ ನುಡಿಯುತ್ತಾರೆ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿರುವ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಪ್ರಸ್ತುತ ಪಹಣಿಯು ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿರುತ್ತದೆ. ಪ್ರತಿವಾದಿ ತಂದೆಯ ಹೆಸರು ತಿಮ್ಮಯ್ಯ ಮತ್ತು ಕೆಂಚಯ್ಯ ಎಂತಲೂ ಕರೆಯುತ್ತಾರೆ. ಪ್ರತಿವಾದಿಯ ಪೊನ್ನಾಥಪುರ ಗ್ರಾಮ. ಪ್ರತಿವಾದಿ ತಂದೆಯ ಪರಿಚಯ ನನಗೆ ಇರುವುದಿಲ್ಲ. ನಾನು ಈ ದಾವಾ ಆಸ್ತಿಗೆ ಸಂಬಂಧಿಸಿದ ರೆವಿನ್ಯೂ ದಾಖಲೆಗಳನ್ನು ನೋಡಿರುತ್ತೇನೆ. ನಾನು ಬಾವಿ ಕೊರೆಸುವ ಸಮಯದಲ್ಲಿ ಹಳೇಬೀಡಿನ ವಿದ್ಯುತ್ ನಿಗಮದಲ್ಲಿ ಅರ್ಜಿ ಕೊಡಲು ಹೋದಾಗ ಅವರು

ಪ್ರತಿವಾದಿಯ ಹೆಸರು ಇರುವುದನ್ನು ತಿಳಿಸಿರುತ್ತಾರೆ. ಪ್ರತಿವಾದಿಯ ಹೆಸರು ಇರುವುದು ನನಗೆ 2017 ನೇ ಇಸವಿಯಲ್ಲಿ ತಿಳಿದುಬಂದಿರುತ್ತದೆ. 30 ವರ್ಷಗಳ ಹಿಂದೆ ಬಾವಿ ಕೊರೆಸುವ ಸಮಯದಲ್ಲಿ ಪಹಣಿ ಪತ್ರಿಕೆಗಳು ನನ್ನ ತಂದೆಯ ಹೆಸರಿನಲ್ಲಿ ಇದ್ದವು. ನನ್ನ ಹೆಸರಿಗೆ ಇಲ್ಲಿಯವರೆಗೂ ಖಾತೆ ವಗೈರೆಗಳು ಆಗಿರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿ ದಾಖಲಾತಿ ಇತ್ತು ಎಂದು ನಾನು ಹೇಳಿದ್ದು ಅದಕ್ಕೆ ಸಂಬಂಧಿಸಿದಂತೆ ಕಂದಾಯಗಳನ್ನು ಪಾವತಿ ಮಾಡಿರುತ್ತೇನೆ. ಸದರಿ ಕಂದಾಯ ಪಾವತಿ ರಶೀದಿಗಳನ್ನು ಹಾಜರುಮಾಡಿರುತ್ತೇನೆ.

2.ಃ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ನನಗೆ ತೊಂದರೆ ಇರಲಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಖಾತೆ ಇತ್ತು, ಖಾತೆಯ ಸಂಖ್ಯೆ 7292. ದಾವಾ ಆಸ್ತಿಯು ಮೂಲತಃ ಸಿದ್ದಲಿಂಗನಾಯಕರಿಂದ ಬಂದಂತಹ ಆಸ್ತಿ ಇರುತ್ತದೆ. ಸದರಿ ದಾವಾ ಜಮೀನು ತಳವಾರಿಕೆ ಬಿಳಿಗೆ ಬಿದ್ದಿದ್ದು ನಂತರ ಇನಾಮು ಆಧಾರದ ಮೇಲೆ ಮಂಜೂರಾತಿ ಆಗಿರುತ್ತದೆ. ದಾವಾ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ಮಂಜೇಗೌಡರ ಜಮೀನು, ಪಶ್ಚಿಮಕ್ಕೆಃ ಶಿವೇಗೌಡರ ಜಮೀನು, ಉತ್ತರಕ್ಕೆಃ ಮಂಜೇಗೌಡರ ಜಮೀನು, ದಕ್ಷಿಣಕ್ಕೆಃ ಬಸವೇಗೌಡರ ಜಮೀನು ಇರುತ್ತದೆ. ವೀರದೇವನಹಳ್ಳಿ ಗ್ರಾಮದ ಸರ್ವೆ ನಂ. 92 ಕ್ಷೇತ್ರ 4 ಎಕರೆ 1 ಗುಂಟೆ ಜಮೀನು ಪ್ರತಿವಾದಿಯ ಅಜ್ಜನಿಗೆ ಮಂಜೂರಾತಿ ಆದಂತಹ ಜಮೀನು ಎಂದರೆ ಸರಿಯಲ್ಲ. ಇದೇ ಸರ್ವೆ ನಂ. ನಮಗಿಂತ ಪೂರ್ವದಲ್ಲಿ ಪ್ರತಿವಾದಿಯ ಅಜ್ಜನಿಗೆ ಮಂಜೂರಾತಿ ಆಗಿರುತ್ತದೆ ಎಂದರೆ ಸರಿಯಲ್ಲ. ಹೆ ಒ ಎ 79/78-79 ರ ಪ್ರಕಾರ ನಮಗಿಂತ ಮೊದಲೇ ಕೆಂಚಯ್ಯ ಬಿನ್ ತಿಮ್ಮಯ್ಯ ರವರಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಅಜ್ಜನಿಗೆ ಆದ ಜಮೀನು ಮತ್ತು ನನ್ನ ಜಮೀನು ಒಂದೇ ಎಂದು ಹೇಳುತ್ತೀರೋ ಅಥವಾ ಇಬ್ಬರದು ಬೇರೆ ಬೇರೆ ಜಮೀನು ಇರುತ್ತದೆಯೇ ಎಂದರೆ ಸಾಕ್ಷಿಯು ದಾವಾ ಆಸ್ತಿ ತನ್ನದು ಪ್ರತಿವಾದಿ ಜಮೀನಿನ ಬಗ್ಗೆ ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

3.ಃ ಸರ್ವೆ ನಂ. 92 ರಲ್ಲಿ ಪೋಡುಗಳು ಆಗಿರುವುದಿಲ್ಲ. ನಾನು ಸದರಿ ಜಮೀನಿನಲ್ಲಿ ಹದ್ದುಬಸ್ತು ಸರ್ವೆ ಮತ್ತು ದುರಸ್ತು ಮಾಡಿಸಿರುವುದಿಲ್ಲ. ನಾನು ಸರಿಯಾಗಿ ಹದ್ದುಬಸ್ತು ಸರ್ವೆ ಮಾಡಿಸದೇ ಇರುವುದರಿಂದ ಸದರಿ ಸರ್ವೆ ನಂ. 92 ರ ಚಕ್ಕುಬಂದಿ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ದಾವಾ ಆಸ್ತಿಯ ಚಕ್ಕುಬಂದಿ ಸರಿ ಇರುತ್ತದೆ ಎಂದು ತೋರಿಸಲು ಹಿಡುವಳಿ ಪತ್ರ ಹಾಜರು ಮಾಡಲು ನನಗೆ ತೊಂದರೆ ಇರುವುದಿಲ್ಲ. ಸದರಿ ಸರ್ವೆ ನಂ. 92 ರ ಜಮೀನಿನ ಬಗ್ಗೆ ವ್ಯವಹಾರ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸಾಲ ಪಡೆದುಕೊಂಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಮಾಡಲು ನನಗೆ ತೊಂದರೆ ಇರುವುದಿಲ್ಲ. ನಾನು ಸಾಲ ಪಡೆದ ಸಮಯದಲ್ಲಿ ಖಾತೆಯು ನನ್ನ ತಂದೆಯ ಹೆಸರಿನಲ್ಲಿ ಇತ್ತು.

(ಈ ಹಂತದಲ್ಲಿ ಮುಂದಿನ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

(ಪ್ರಸನ್ನಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ. ಎಂ. ಎಫ್. ಸಿ. ಬೇಲೂರು.

Case called again.

**Civil Judge and JMFC,**
**Belur.**